# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 491 (410) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 16/09/2021 |
| ಉತ್ತರಿಸುವವರು | : | ಮಾನ್ಯ ಕಾರ್ಮಿಕ ಸಚಿವರು |

| ಕ್ರ ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಮಂಡ್ಯ ಜಿಲ್ಲೆಯಲ್ಲಿರುವ ಸಂಘಟಿತ ಮತ್ತು ಅಸಂಘಟಿತ ಕಾರ್ಮಿಕರ ಸಂಖ್ಯೆ ಎಷ್ಟು; ಯಾವ ಯಾವ ಉದ್ಯಮಗಳಲ್ಲಿ ಎಷ್ಟು ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ; (ತಾಲ್ಲೂಕುವಾರು ವಿವರ ನೀಡುವುದು) | 1. **ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ:-** ಮಂಡ್ಯ ಜಿಲ್ಲೆಯಲ್ಲಿರುವ ಸಂಘಟಿತ ಮತ್ತು ಅಸಂಘಟಿತ ಕಾರ್ಮಿಕರ ತಾಲ್ಲೂಕುವಾರು ಮಾಹಿತಿಯನ್ನು **ಅನುಬಂಧ-1,2,3** ರಲ್ಲಿ ಸಲ್ಲಿಸಿದೆ.<br><br>2. **ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ** ಅಸಂಘಟಿತ ಕಾರ್ಮಿಕರ ಸಂಖ್ಯೆಗೆ ಸಂಬಂಧಿಸಿದಂತೆ ಈವರೆಗೆ ಕಾರ್ಮಿಕ ಇಲಾಖೆಯಿಂದ ಯಾವುದೇ ಸಮೀಕ್ಷೆ ನಡೆಸಿರುವುದಿಲ್ಲ. ಆದ್ದರಿಂದ ಅಸಂಘಟಿತ ಕಾರ್ಮಿಕರ ನಿಖರವಾದ ಅಂಕಿ ಅಂಶಗಳು ಲಭ್ಯವಿರುವುದಿಲ್ಲ.<br><br>**ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು ಜಾರಿಗೊಳಿಸುತ್ತಿರುವ ವಿವಿಧ ಯೋಜನೆಗಳಡಿ ನೋಂದಣಿಯಾಗಿರುವ ಅಸಂಘಟಿತ ಕಾರ್ಮಿಕರ ವಿವರ ಈ ಕೆಳಕಂಡಂತಿದೆ:**<br><br>1. **ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆ:**<br><br>ಸಾರಿಗೆ ಇಲಾಖೆಯು ಒದಗಿಸಿರುವ ದತ್ತಾಂಶದ ಪ್ರಕಾರ ರಾಜ್ಯದಲ್ಲಿ ಊರ್ಜಿತ ಖಾಸಗಿ ವಾಣಿಜ್ಯ ಸಾರಿಗೆ ವಾಹನ ಚಾಲನಾ ಪರವಾನಗಿ ಹೊಂದಿರುವ 9,12,100 ಚಾಲಕರಿದ್ದು, ಅದರಲ್ಲಿ ಸರ್ಕಾರಿ ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾಯಂ ಚಾಲಕರನ್ನು ಹೊರತುಪಡಿಸಿ ಉಳಿದ 8,40,561 ಚಾಲಕರನ್ನು ಈ ಯೋಜನೆಯಡಿ ಫಲಾನುಭವಿಗಳೆಂದು ಪರಿಗಣಿಸಲಾಗಿದೆ. |

| | | |
|---|---|---|
| | | ಸದರಿ ದತ್ತಾಂಶದನ್ವಯ ಮಂಡ್ಯ ಜಿಲ್ಲೆಯಲ್ಲಿ ಒಟ್ಟು **27,992** ಚಾಲಕರನ್ನು ಈ ಯೋಜನೆಯಡಿ ಫಲಾನುಭವಿಗಳೆಂದು ಪರಿಗಣಿಸಲಾಗಿದೆ. |

**ತಾಲ್ಲೂಕುವಾರು ಮಾಹಿತಿ ಈ ಕೆಳಕಂಡಂತಿದೆ.**

| ತಾಲ್ಲೂಕು | ಆರ್.ಟಿ.ಓ ದತ್ತಾಂಶ |
|---|---|
| ಕೆ.ಆರ್.ಪೇಟೆ | 635 |
| ಮದ್ದೂರು | 3773 |
| ಮಳವಳ್ಳಿ | 3896 |
| ಮಂಡ್ಯ | 15295 |
| ನಾಗಮಂಗಲ | 2425 |
| ಪಾಂಡವಪುರ | 612 |
| ಶ್ರೀರಂಗ ಪಟ್ಟಣ | 1356 |
| **ಒಟ್ಟು** | **27,992** |

**2.ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ:**

ಈ ಯೋಜನೆಯಡಿ ಮಂಡ್ಯ ಜಿಲ್ಲೆಯಲ್ಲಿ ಪ್ರಸ್ತುತ ಅಸಂಘಟಿತ ಕಾರ್ಮಿಕರ 11 ವರ್ಗಗಳ ಹಮಾಲರು, ಗೃಹಕಾರ್ಮಿಕರು, ಚಿಂದಿ ಆಯುವವರು, ಟೈಲರ್‌ಗಳು, ಮೆಕ್ಯಾನಿಕ್ಸ್, ಅಗಸರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು, ಕ್ಷೌರಿಕರು ಹಾಗೂ ಭಟ್ಟಿ ಕಾರ್ಮಿಕ ವೃತ್ತಿಯ ಒಟ್ಟು 5979 ಅಸಂಘಟಿತ ಕಾರ್ಮಿಕರನ್ನು ನೋಂದಾಯಿಸಲಾಗಿದೆ.

**ತಾಲ್ಲೂಕುವಾರು ಹಾಗೂ ವೃತ್ತಿವಾರು ಮಾಹಿತಿಯನ್ನು ಅನುಬಂಧ-4 ರಲ್ಲಿ ಒದಗಿಸಿದೆ.**

**ಕೋವಿಡ್-19ರ ವಿಶೇಷ ಪ್ಯಾಕೇಜ್:-**

ಕೋವಿಡ್-19 ರ 1ನೇ ಅಲೆಯ ಲಾಕ್‌ಡೌನ್ ಕಾರಣ ಸಂಕಷ್ಟಕ್ಕೊಳಗಾದ ಅಸಂಘಟಿತ ಕಾರ್ಮಿಕರ 11 ವರ್ಗಗಳಾದ "ಹಮಾಲರು, ಮನೆಗೆಲಸದವರು, ಚಿಂದಿ ಆಯುವವರು, ಟೈಲರ್ಸ್, ಮೆಕ್ಯಾನಿಕ್, ಅಗಸರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು, ಕ್ಷೌರಿಕರು ಹಾಗೂ ಭಟ್ಟಿ ಕಾರ್ಮಿಕ" ವೃತ್ತಿ ನಿರ್ವಹಿಸುತ್ತಿರುವ ಅಸಂಘಟಿತ ಕಾರ್ಮಿಕರಿಗೆ ಸನ್ಮಾನ್ಯ ಮುಖ್ಯಮಂತ್ರಿಯವರು ಘೋಷಿಸಿದ ವಿಶೇಷ ಪ್ಯಾಕೇಜ್ ಅಡಿ ಒಂದು ಬಾರಿಯ ರೂ.5,000/- ಗಳ ನೆರವನ್ನು ಕೋರಿ ಮಂಡ್ಯ ಜಿಲ್ಲೆಯಲ್ಲಿ ಒಟ್ಟು 6400 ಕಾರ್ಮಿಕರು ಅರ್ಜಿ ಸಲ್ಲಿಸಿರುತ್ತಾರೆ.

**ಕೋವಿಡ್-19ರ, 2ನೇ ಅಲೆಯ:-** ಲಾಕ್‌ಡೌನ್ ಕಾರಣ ಸಂಕಷ್ಟಕ್ಕೊಳಗಾದ ಅಸಂಘಟಿತ ಕಾರ್ಮಿಕರ 11 ವರ್ಗಗಳಾದ "ಹಮಾಲರು, ಮನೆಗೆಲಸದವರು, ಚಿಂದಿ ಆಯುವವರು, ಟೈಲರ್ಸ್, ಮೆಕ್ಯಾನಿಕ್, ಅಗಸರು, ಅಕ್ಕಸಾಲಿಗರು, ಕಮ್ಮಾರರು, ಕುಂಬಾರರು, ಕ್ಷೌರಿಕರು ಹಾಗೂ ಭಟ್ಟಿ ಕಾರ್ಮಿಕ" ವೃತ್ತಿ ನಿರ್ವಹಿಸುತ್ತಿರುವ ಅಸಂಘಟಿತ ಕಾರ್ಮಿಕರಿಗೆ ಸನ್ಮಾನ್ಯ ಮುಖ್ಯಮಂತ್ರಿಯವರು ಘೋಷಿಸಿದ ವಿಶೇಷ ಪ್ಯಾಕೇಜ್ ಅಡಿ ಒಂದು ಬಾರಿಯ ರೂ.2,000/-ಗಳ ನೆರವನ್ನು ಕೋರಿ ಮಂಡ್ಯ ಜಿಲ್ಲೆಯಲ್ಲಿ ಒಟ್ಟು 45,058 ಕಾರ್ಮಿಕರು ಅರ್ಜಿ ಸಲ್ಲಿಸಿರುತ್ತಾರೆ.

**ಕೋವಿಡ್-19ರ 1ನೇ ಅಲೆ ಹಾಗೂ 2ನೇ ಅಲೆಯ ಲಾಕ್‌ಡೌನ್ ಸಂದರ್ಭದಲ್ಲಿ ನೀಡಲಾದ ವಿಶೇಷ ಪ್ಯಾಕೇಜ್ ಅಡಿ ಅರ್ಜಿ ಸಲ್ಲಿಸಿದ ಕಾರ್ಮಿಕರ ತಾಲ್ಲೂಕುವಾರು ಮಾಹಿತಿಯನ್ನು ಅನುಬಂಧ-2ರಲ್ಲಿ ಒದಗಿಸಿದೆ.**

**2. ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ:-**

ಮಂಡ್ಯ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಸಂಘಟಿತ ಕಾರ್ಮಿಕರ ವಿವರ ಕೆಳಕಂಡಂತಿದೆ;

| ಉದ್ಯಮ | ಸಂಖ್ಯೆ | ಕಾರ್ಮಿಕರು |
|---|---|---|
| ಗಾರ್ಮೆಂಟ್ಸ್ | 3 | 8571 |
| ಕೆ.ಪಿ.ಟಿ.ಸಿ.ಎಲ್ | 2 | 353 |
| ಇತರೆ ಕಾರ್ಖಾನೆಗಳು | 12 | 3633 |
| ಇತರೆ ಕಾರ್ಯಸಂಸ್ಥೆಗಳು | 31 | 2208 |
| **ಒಟ್ಟು** | **48** | **14765** |

ಆ) ರಾಜ್ಯದ ಯಾವ ಯಾವ ನಗರಗಳಲ್ಲಿ ಇ.ಎಸ್.ಐ ಆಸ್ಪತ್ರೆಗಳಿವೆ (ಅವುಗಳ ವಿವರ ನೀಡುವುದು)

ಈ ಇಲಾಖೆಯ ಅಡಿಯಲ್ಲಿ 07 ಕಾರಾವಿ ಆಸ್ಪತ್ರೆಗಳು ಕಾರ್ಯನಿರ್ವಹಿಸುತ್ತಿವೆ.

1. ಕಾರಾವಿ ಆಸ್ಪತ್ರೆ, ಇಂದಿರನಗರ, ಬೆಂಗಳೂರು.
2. ಕಾರಾವಿ ಆಸ್ಪತ್ರೆ, ಮೈಸೂರು.
3. ಕಾರಾವಿ ಆಸ್ಪತ್ರೆ, ಮಂಗಳೂರು.
4. ಕಾರಾವಿ ಆಸ್ಪತ್ರೆ, ದಾವಣಗೆರೆ.
5. ಕಾರಾವಿ ಆಸ್ಪತ್ರೆ, ಹುಬ್ಬಳ್ಳಿ.
6. ಕಾರಾವಿ ಆಸ್ಪತ್ರೆ, ಬೆಳಗಾವಿ.
7. ಕಾರಾವಿ ಆಸ್ಪತ್ರೆ, ದಾಂಡೇಲಿ.

| | | |
|---|---|---|
| ಇ) | ಸರ್ಕಾರವು ಕಾರ್ಮಿಕರಿಗೆ ನಿಗದಿಪಡಿಸಿರುವ ಮಾಸಿಕ ವೇತನ ಮತ್ತು ಇತರೆ ಭತ್ಯಗಳೇನು: ಕೆಲಸ ನಿರ್ವಹಿಸುವ ಜಾಗದಲ್ಲಿ ಕಾರ್ಮಿಕರಿಗೆ ಅಪಘಾತವಾಗಿ ಅಂಗವಿಕಲತೆ ಅಥವಾ ಇತರೆ ಅಂಗಹೀನತೆ ಆದಲ್ಲಿ ಇಂತಹ ಕಾರ್ಮಿಕರಿಗೆ ಸರ್ಕಾರ ಮತ್ತು ಉದ್ಯೋಗದಾತರು ನೀಡುವ ಪರಿಹಾರಗಳೇನು: (ವಿವರ ನೀಡುವುದು) | ರಾಜ್ಯ ಸರ್ಕಾರವು ಈವರೆಗೆ 83 ಅನುಸೂಚಿತ ಉದ್ದಿಮೆಗಳನ್ನು ಗುರುತಿಸಿ ಕನಿಷ್ಠ ವೇತನ ದರಗಳನ್ನು ನಿಗದಿಪಡಿಸಲಾಗಿದೆ. ಗ್ರಾಹಕ ಸೂಚ್ಯಂಕದ ಆಧಾರದ ಮೇಲೆ ಕಾಲ ಕಾಲಕ್ಕೆ ವ್ಯತ್ಯಾಸದ ತುಟ್ಟಿಭತ್ಯೆಯನ್ನು ನಿಗದಿಪಡಿಸಲಾಗುತ್ತದೆ. 2021-22 ನೇ ಸಾಲಿಗೆ ಅನುಸೂಚಿತ ಉದ್ದಿಮೆಗಳಿಗೆ ಅನ್ವಯವಾಗುವ ಕನಿಷ್ಠ ವೇತನ ದರಗಳ ಪಟ್ಟಿಯನ್ನು **ಅನುಬಂಧ-5** ರಲ್ಲಿ ಒದಗಿಸಿದೆ.<br><br>ಅಪಘಾತವಾಗಿ ಮರಣ, ಅಂಗವಿಕಲತೆ ಅಥವಾ ಅಂಗ ಹೀನತೆ ಆದಂತಹ ಸಂದರ್ಭಗಳಲ್ಲಿ ಕಾರ್ಮಿಕ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಮಂಡಳಿಗಳು ನೀಡುತ್ತಿರುವ ಪರಿಹಾರದ ವಿವರಗಳು ಈ ಕೆಳಕಂಡಂತಿವೆ.<br><br>**1. ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ:-**<br>ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು ಜಾರಿಗೊಳಿಸುತ್ತಿರುವ, " ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆ"ಯಡಿ, ಖಾಸಗಿ ವಾಣಿಜ್ಯ ಸಾರಿಗೆ ವಾಹನ ಚಲಾಯಿಸಲು ಸಾರಿಗೆ ಇಲಾಖೆಯಿಂದ ಊರ್ಜಿತ ಚಾಲನ ಪರವಾನಗಿ ಹೊಂದಿರುವ ಚಾಲಕರಿಗೆ ಹಾಗೂ ಯೋಜನೆಯಡಿ ನೋಂದಾಯಿತ ನಿರ್ವಾಹಕರು ಹಾಗೂ ಕ್ಲೀನರ್‌ಗಳಿಗೆ ಈ ಕೆಳಕಂಡ ಅಪಘಾತ ಪರಿಹಾರ ಸೌಲಭ್ಯವನ್ನು ನೀಡಲಾಗುತ್ತಿದೆ:<br><br>➢ ಅಪಘಾತದಿಂದ ಚಾಲಕರು, ನಿರ್ವಾಹಕರು ಹಾಗೂ ಕ್ಲೀನರ್‌ಗಳು ಮರಣ ಹೊಂದಿದಲ್ಲಿ, ಅವರ ನಾಮನಿರ್ದೇಶಿತರಿಗೆ ರೂ.5 ಲಕ್ಷ ಪರಿಹಾರ.<br>➢ ಅಪಘಾತದಿಂದ ಶಾಶ್ವತ ದುರ್ಬಲತೆ ಹೊಂದಿದಾಗ, ಫಲಾನುಭವಿಗೆ ದುರ್ಬಲತೆಯ ಪ್ರಮಾಣಕ್ಕನುಗುಣವಾಗಿ ಗರಿಷ್ಠ ರೂ.2 ಲಕ್ಷವ ವರೆಗೆ ಪರಿಹಾರ.<br>➢ ಅಪಘಾತದಿಂದ ತಾತ್ಕಾಲಿಕ ದುರ್ಬಲತೆ ಹೊಂದಿದಾಗ.<br><br>ಅಪಘಾತಕೊಳ್ಳಗಾಗಿ ಆಸ್ಪತ್ರೆಯಲ್ಲಿ 15 ದಿನಗಳಿಗಿಂತ ಕಡಿಮೆ ಅವಧಿಗೆ ಒಳರೋಗಿಯಾಗಿ ಚಿಕಿತ್ಸೆ ಪಡೆದಲ್ಲಿ, ಗರಿಷ್ಠ ರೂ. 50,000/- ರವರೆಗೆ: ಅಥವಾ ನಿಖರ ಆಸ್ಪತ್ರೆ ವೆಚ್ಚ, ಇವುಗಳಲ್ಲಿ ಯಾವುದು ಕಡಿಮೆಯೊ ಅದನ್ನು ಪಾವತಿಸಲಾಗುವುದು. |

| | | |
|---|---|---|
| | | **2.ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ:-**<br>ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿಯಲ್ಲಿ ಕಾರ್ಮಿಕರಿಗಾಗಿ ಯಾವುದೇ ಮಾಸಿಕ ವೇತನ ಭತ್ಯೆಗಳನ್ನು ನೀಡಲು ಅವಕಾಶವಿರುವುದಿಲ್ಲ. ಕೆಲಸ ನಿರ್ವಹಿಸುವ ಜಾಗದಲ್ಲಿ ಕಾರ್ಮಿಕರಿಗೆ ಅಪಘಾತವಾಗಿ ಅಂಗವಿಕಲತೆ ಅಥವಾ ಇತರೆ ಊನಗಳಾದಲ್ಲಿ ಕಾರ್ಮಿಕರಿಗೆ ಕಲ್ಯಾಣ ಯೋಜನೆಗಳಡಿ ಈ ಕೆಳಕಂಡ ಸೌಲಭ್ಯಗಳನ್ನು ಒದಗಿಸಲಾಗುತ್ತದೆ.<br>ಕಾರ್ಮಿಕರ ಅಪಘಾತ ಧನ ಸಹಾಯ : ಕಾರ್ಮಿಕರಿಗೆ ಕೆಲಸದ ವೇಳೆಯಲ್ಲಿ ಅಪಘಾತವಾದಲ್ಲಿ ಕನಿಷ್ಠ ರೂ. 1,000/- ಗರಿಷ್ಠ ರೂ 10,000/- ವರೆಗೆ ಧನ ಸಹಾಯ ನೀಡಲಾಗುವುದು. ಸೌಲಭ್ಯ ಪಡೆಯುವ ಕಾರ್ಮಿಕರು ಅಪಘಾತವಾದ ಮೂರು ತಿಂಗಳೊಳಗೆ ಅರ್ಜಿ ಸಲ್ಲಿಸತಕ್ಕದ್ದು.<br>**3. ಕಾರ್ಮಿಕರಿಗೆ ವೈದ್ಯಕೀಯ ನೆರವು :** ಹೃದಯ ಶಸ್ತ್ರಚಿಕಿತ್ಸೆ, ಕಿಡ್ನಿ ಟ್ರಾನ್ಸ್‌ಪ್ಲಾಂಟೇಷನ್, ಕ್ಯಾನ್ಸರ್. ಆಂಜಿಯೋಪ್ಲಾಸ್ಟಿ, ಕಣ್ಣು, ಅರ್ಥೋಪೆಡಿಕ್, ಗರ್ಭಕೋಶದ ಶಸ್ತ್ರ ಚಿಕಿತ್ಸೆ, ಗಾಲ್ ಬ್ಲಾಡರ್ ತೊಂದರೆ, ಮೆದುಳಿನ ರಕ್ತಸ್ರಾವ ಚಿಕಿತ್ಸೆಗೆ ಕನಿಷ್ಠ ರೂ. 1,000/-ದಿಂದ ಗರಿಷ್ಠ ರೂ. 25,000/- ವರೆಗೆ ಮತ್ತು ಆರೋಗ್ಯ ತಪಾಸಣೆಗೆ ರೂ. 500/-ರಿಂದ ರೂ. 1000/-ವರೆಗೆ ಧನ ಸಹಾಯ ನೀಡಲಾಗುವುದು. |
| ಈ) | ಸರ್ಕಾರವು ಕಾರ್ಮಿಕರ ಶ್ರೇಯೋಭಿವೃದ್ಧಿಗಾಗಿ ಅನುಷ್ಠಾನಗೊಳಿಸಿರುವ ಯೋಜನೆಗಳು ಯಾವುವು; ಈ ಯೋಜನೆಗಳ ಮಾನದಂಡಗಳೇನು; ಈ ಯೋಜನೆಗಳಡಿ ಕಳೆದ ಎರಡು ವರ್ಷಗಳಲ್ಲಿ ಮಂಡ್ಯ ಜಿಲ್ಲೆಯಲ್ಲಿ ಪ್ರಯೋಜನ ಪಡೆದಿರುವ ಕಾರ್ಮಿಕರ ಸಂಖ್ಯೆ ಎಷ್ಟು? (ತಾಲ್ಲೂಕುವಾರು ಮಾಹಿತಿ ನೀಡುವುದು) | ಸರ್ಕಾರವು ಸಂಘಟಿತ ಕಾರ್ಮಿಕರ ಶ್ರೇಯೋಭೀವೃದ್ಧಿಗಾಗಿ ಇ.ಎಸ್.ಐ ಕಾಯ್ದೆ, ಇ.ಪಿ.ಎಫ್ ಕಾಯ್ದೆ, ಉಪಧನಪಾವತಿ ಕಾಯ್ದೆಗಳ ಮೂಲಕ ಪಿಂಚಣಿ, ವೈದ್ಯಕೀಯ, ಯೋಜನೆಗಳನ್ನು ನೀಡಲಾಗುತ್ತದೆ. ಅಲ್ಲದೇ ಸರ್ಕಾರವು ಅಸಂಘಟಿತ ಕಾರ್ಮಿಕರ ಕಲ್ಯಾಣಕ್ಕಾಗಿ ವಿವಿಧ ಮಂಡಳಿಗಳ ಮೂಲಕ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳ ವಿವರಗಳು ಈ ಕೆಳಕಂಡಂತಿವೆ.<br>**1. ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ:-**<br>ಅಸಂಘಟಿತ ಕಾರ್ಮಿಕರ ಶ್ರೇಯೋಭೀವೃದ್ಧಿಗಾಗಿ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ, ಕಾರ್ಮಿಕರ ಕಲ್ಯಾಣ ಮಂಡಳಿಗಳಿಂದ ಅನೇಕ ಯೋಜನೆಗಳನ್ನು ಕಾರ್ಮಿಕರಿಗೆ ಮತ್ತು ಅವರ ಮಕ್ಕಳಿಗೆ ಅನುಷ್ಠಾನಗೊಳಿಸಿರುವ ಮಾಹಿತಿಯನ್ನು ಒಳಗೊಂಡ ಕರಪತ್ರವನ್ನು ಲಗತ್ತಿಸಿದೆ. |

| | | |
|---|---|---|
| | | ಯೋಜನೆಗಳನ್ನು ಪಡೆಯಲು ಮಾನದಂಡಗಳನ್ನು ಕರ್ನಾಟಕ ಕಾರ್ಮಿಕರ ಕಲ್ಯಾಣ ನಿಧಿ ಕಾಯ್ದೆ-1965 ಮತ್ತು ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ (ಉದ್ಯೋಗ ಕ್ರಮೀಕರಣ & ಸೇವಾ ಷರತ್ತುಗಳು) ಕಾಯ್ದೆ-1996ರ ಕರ್ನಾಟಕ ನಿಯಮಗಳು-2006ರನ್ವಯ ನಿಗಧಿಪಡಿಸಲಾಗಿರುತ್ತದೆ. ಕಳೆದ ಎರಡು ವರ್ಷಗಳಲ್ಲಿ ಮಂಡ್ಯ ಜಿಲ್ಲೆಯಲ್ಲಿ ಪ್ರಯೋಜನ ಪಡೆದಿರುವ ಕಾರ್ಮಿಕರ ತಾಲ್ಲೂಕುವಾರು ಮಾಹಿತಿಯನ್ನು **ಅನುಬಂಧ-6 ರಲ್ಲಿ** ಸಲ್ಲಿಸಿದೆ<br><br>ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯು ಅಸಂಘಟಿತ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸಲು ರಾಜ್ಯ ಸರ್ಕಾರದ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸುತ್ತಿದೆ.<br><br>1. **ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆ:-**<br><br>**<u>ಮಾನದಂಡ:-</u>**<br>• ಈ ಯೋಜನೆಯು ಕರ್ನಾಟಕ ರಾಜ್ಯಕ್ಕೆ ಮಾತ್ರ ಅನ್ವಯಿಸುತ್ತದೆ.<br>• ಯೋಜನೆಯು ಖಾಸಗಿ ವಾಣಿಜ್ಯ ಸಾರಿಗೆ ಕಾರ್ಮಿಕರಾದ ಚಾಲಕರು, ನಿರ್ವಾಹಕರು ಹಾಗೂ ಕ್ಲೀನರ್‌ಗಳಿಗೆ ಅನ್ವಯಿಸುತ್ತದೆ.<br>• ವಯೋಮಿತಿ 20 ರಿಂದ 70 ವರ್ಷಗಳು.<br>• ಯೋಜನೆಯ ಸೌಲಭ್ಯಗಳು ಕರ್ತವ್ಯದಲ್ಲಿರುವಾಗ ಹಾಗೂ ಇಲ್ಲದಿರುವಾಗಲೂ ಸಂಭವಿಸಿದ ಅಪಘಾತ ಪ್ರಕರಣಗಳಲ್ಲಿ ಸಹ ಲಭ್ಯವಾಗುತ್ತವೆ.<br>• ಚಾಲಕರು, ಕರ್ನಾಟಕ ರಾಜ್ಯ ಸಾರಿಗೆ ಇಲಾಖೆಯಿಂದ ವಾಣಿಜ್ಯ ವಾಹನ ಚಲಾಯಿಸಲು ಊರ್ಜಿತ ಚಾಲನಾ ಪರವಾನಗಿಯನ್ನು ಹೊಂದಿರಬೇಕು.<br><br>**<u>ಶೈಕ್ಷಣಿಕ ಧನಸಹಾಯ:-</u>**<br>• ಫಲಾನುಭವಿಯ ಪೋಷಕರು ಚಾಲಕರಾಗಿದ್ದು, ಅಪಘಾತದಿಂದ ಮರಣ ಅಥವಾ ಸಂಪೂರ್ಣ ಶಾಶ್ವತ ದುರ್ಬಲತೆ ಹೊಂದಿರಬೇಕು.<br>• 1 ರಿಂದ 12ನೇತರಗತಿಯವರೆಗೆ ವ್ಯಾಸಂಗ ಮಾಡುತ್ತಿರಬೇಕು. |

ಮಂಡ್ಯ ಜಿಲ್ಲೆಯಲ್ಲಿ ಕಳೆದೆರಡು ವರ್ಷಗಳಿಂದ ಸದರಿ ಸೌಲಭ್ಯ ಪಡೆದ ಫಲಾನುಭವಿಗಳ ವಿವರ ಈ ಕೆಳಗಿನಂತಿದೆ.

- ಈ ಯೋಜನೆಯಡಿ 24 ಅಪಘಾತ ಪ್ರಕರಣ ಹಾಗೂ ಆಸ್ಪತ್ರೆ ವೆಚ್ಚದ ಪ್ರಕರಣಗಳಿಗೆ ರೂ. 1,12,23,511/-ಗಳ ಪರಿಹಾರ ನೀಡಲಾಗಿದೆ.

ತಾಲ್ಲೂಕುವಾರು ಮಾಹಿತಿ ಈ ಕೆಳಕಂಡಂತಿದೆ.

| ತಾಲ್ಲೂಕು | ಪ್ರಕರಣ | ಮೊತ್ತ |
|---|---|---|
| ಕೆ.ಆರ್ ಪೇಟೆ | 1 | 500000 |
| ಮದ್ದೂರು | 6 | 3000000 |
| ಮಳವಳ್ಳಿ | 4 | 2000000 |
| ಮಂಡ್ಯ | 8 | 3640000 |
| ನಾಗಮಂಗಲ | 3 | 1500000 |
| ಪಾಂಡವಪುರ | 1 | 83511 |
| ಶ್ರೀರಂಗ ಪಟ್ಟಣ | 1 | 500000 |
| **ಒಟ್ಟು** | **24** | **1,12,23,511** |

- ಅಸಂಘಟಿತ ಕಾರ್ಮಿಕರ ಒಟ್ಟು 6 ಜನ ಮಕ್ಕಳಿಗೆ (ವಿದ್ಯಾರ್ಥಿಗಳಿಗೆ) ರೂ.60,000/- ಗಳ ಶೈಕ್ಷಣಿಕ ಸಹಾಯ ಧನ ವಿತರಿಸಲಾಗಿದೆ.

ತಾಲ್ಲೂಕುವಾರು ಮಾಹಿತಿ ಈ ಕೆಳಕಂಡಂತಿದೆ;

| ತಾಲ್ಲೂಕು ಹೆಸರು | ಪ್ರಕರಣ | ಮೊತ್ತ |
|---|---|---|
| ಮದ್ದೂರು | 4 | 40000 |
| ಮಂಡ್ಯ | 2 | 20000 |
| ಒಟ್ಟು | 6 | 60,000 |

<u>ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ</u>:-

<u>ಮಾನದಂಡ</u>:-

- ಈ ಯೋಜನೆಯು ಕರ್ನಾಟಕ ರಾಜ್ಯಕ್ಕೆ ಮಾತ್ರ ಅನ್ವಯಿಸುತ್ತದೆ.
- ವಯೋಮಿತಿ 18 ರಿಂದ 60 ವರ್ಷಗಳು.
- ಪ್ರಸ್ತುತ ಮೇಲ್ಕಂಡ ಅಸಂಘಟಿತ ವಲಯದ 11 ವರ್ಗಗಳ ಅಸಂಘಟಿತ ಕಾರ್ಮಿಕರಿಗೆ ಅನ್ವಯಿಸುತ್ತದೆ.
- ಮಂಡ್ಯ ಜಿಲ್ಲೆಗೆ ಸಂಬಂಧಿಸಿದಂತೆ ಈ ಯೋಜನೆಯಡಿ ಮೇಲ್ಕಂಡ ಅಸಂಘಟಿತ ವಲಯದ 11 ವಲಯಗಳ 3573 ಅಸಂಘಟಿತ ಕಾರ್ಮಿಕರನ್ನು ನೋಂದಾಯಿಸಿ ಸ್ಮಾರ್ಟ್ ಕಾರ್ಡ್ ನೀಡಲಾಗಿದೆ.

ತಾಲ್ಲೂಕುವಾರು ಮಾಹಿತಿ ಈ ಕೆಳಕಂಡಂತಿದೆ.

| ತಾಲ್ಲೂಕು | ಸ್ಮಾರ್ಟ್ ಕಾರ್ಡ್ ವಿವರ |
|---|---|
| ಕೆ.ಆರ್ ಪೇಟೆ | 285 |
| ಮದ್ದೂರು | 717 |
| ಮಳವಳ್ಳಿ | 412 |
| ಮಂಡ್ಯ | 1593 |
| ನಾಗಮಂಗಲ | 66 |
| ಪಾಂಡವಪುರ | 238 |
| ಶ್ರೀರಂಗ ಪಟ್ಟಣ | 262 |
| **ಒಟ್ಟು** | **3573** |

**ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ:-**

ಈ ಮಂಡಳಿಯು ಸಂಘಟಿತ ಕಾರ್ಮಿಕರ ಶ್ರೇಯೋಭಿವೃದ್ಧಿಗಾಗಿ ಈ ಕೆಳಗಿನ ಕಲ್ಯಾಣ ಯೋಜನೆಗಳನ್ನು ಅನುಷ್ಠಾನಗೊಳಿಸಿರುತ್ತದೆ. ಮಂಡಳಿಗೆ ವಂತಿಗೆ ಪಾವತಿ ಮಾಡುವ ವಿವಿಧ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಸಂಘಟಿತ ಕಾರ್ಮಿಕರು ಮತ್ತು ಅವರ ಕುಟುಂಬದ ಅವಲಂಬಿತರಿಗೆ ಈ ಯೋಜನೆಗಳ ಸೌಲಭ್ಯಗಳನ್ನು ನೀಡಲಾಗುತ್ತಿದೆ.

1) **ಕಾರ್ಮಿಕರ ಮಕ್ಕಳಿಗೆ ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯ.**
2) **ಕಾರ್ಮಿಕರಿಗೆ ವೈದ್ಯಕೀಯ ನೆರವು.**
3) **ಕಾರ್ಮಿಕರಿಗೆ ಅಪಘಾತ ಧನ ಸಹಾಯ.**
4) **ಹೆರಿಗೆ ಭತ್ಯೆ ಸೌಲಭ್ಯ.**
5) **ಮೃತ ಕಾರ್ಮಿಕನ ಅಂತ್ಯ ಸಂಸ್ಕಾರಕ್ಕೆ ಧನ ಸಹಾಯ.**
6) **ವಾರ್ಷಿಕ ವೈದ್ಯಕೀಯ ತಪಾಸಣೆ ಶಿಬಿರ ಹಮ್ಮಿಕೊಳ್ಳುವ ಟ್ರೇಡ್ ಯೂನಿಯನ್/ಸಂಸ್ಥೆಗಳಿಗೆ ಧನಸಹಾಯ.**
7) **ವಾರ್ಷಿಕ ಕ್ರೀಡಾ ಕೂಟ ಹಮ್ಮಿಕೊಳ್ಳುವ ನೊಂದಾಯಿತ ಕಾರ್ಮಿಕ ಸಂಘಗಳಿಗೆ ಧನಸಹಾಯ.**

2020-21ನೇ ಸಾಲಿಗೆ 14527 ಸಂಘಟಿತ ಕಾರ್ಮಿಕರಿಗೆ ಮತ್ತು ಅವರ ಕುಟುಂಬದ ಅವಂಬಿತರಿಗೆ ಕಲ್ಯಾಣ ಯೋಜನೆಯಡಿ ಸೌಲಭ್ಯಗಳನ್ನು ನೀಡಲಾಗಿದೆ. ತಾಲ್ಲೂಕುವಾರು ಮಾಹಿತಿ ಲಭ್ಯವಿರುವುದಿಲ್ಲ. ಜಿಲ್ಲಾವಾರು ಮಾಹಿತಿ ವಿವರಗಳನ್ನು ಅನುಬಂಧ-7 ರಲ್ಲಿ ಲಗತ್ತಿಸಿದೆ.

**ಕಾಇ 375 ಎಲ್‌ಇಟಿ 2021**

(ಅರಬೈಲ್ ಶಿವರಾಂ ಹೆಬ್ಬಾರ್)
ಕಾರ್ಮಿಕ ಸಚಿವರು

## ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ: 491

### ಅನುಬಂಧ–1

**ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ನೋಂದಾಯಿತರಾದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಮಾಹಿತಿ.**

| ಕ್ರ.ಸಂ | ತಾಲ್ಲೂಕು | ನೋಂದಾಯಿತ ಕಾರ್ಮಿಕರ ಸಂಖ್ಯೆ | | |
|---|---|---|---|---|
| | | ಪುರುಷರು | ಮಹಿಳೆಯರು | ಒಟ್ಟು |
| 1 | ಮಂಡ್ಯ | 9442 | 2961 | 12403 |
| 2 | ಮದ್ದೂರು | 4803 | 1585 | 6388 |
| 3 | ಕೃಷ್ಣರಾಜಪೇಟೆ | 4075 | 2119 | 6194 |
| 4 | ನಾಗಮಂಗಲ | 1678 | 441 | 2119 |
| 5 | ಮಳವಳ್ಳಿ | 5450 | 2284 | 7734 |
| 6 | ಶ್ರೀರಂಗಪಟ್ಟಣ | 4058 | 771 | 4829 |
| 7 | ಪಾಂಡವಪುರ | 3421 | 1430 | 4851 |
| | **ಒಟ್ಟು** | **32927** | **11591** | **44518** |

ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ: 491

## ಅನುಬಂಧ-2

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ

ಮಂಡ್ಯ ಜಿಲ್ಲೆಗೆ ಸಂಬಂಧಿಸಿದ ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆಯಡಿ ನೋಂದಣಿಯಾಗಿರುವ 11 ವಲಯದ ಅಸಂಘಟಿತ ಕಾರ್ಮಿಕರ ವಿವರ

| ಕ್ರ.ಸಂ | ತಾಲ್ಲೂಕು | ಕ್ಷೌರಿಕರು | ಕುಂಬಾರರು | ಮನೆಕೆಲಸ | ಅಕ್ಕಸಾಲಿಗರು | ಹಮಾಲಿ | ಮರಿಭಟ್ಟಿ | ಮೆಕ್ಯಾನಿಕ್ | ಚಿಂದಿ ಆಯುವವವರು | ಟೈಲರ್ | ಕಮ್ಮಾರರು | ಅಗಸರು | ಒಟ್ಟು |
|---|---|---|---|---|---|---|---|---|---|---|---|---|---|
| 1 | ಕೆ.ಆರ್ ಪೇಟೆ | 46 | 0 | 78 | 5 | 45 | 0 | 62 | 34 | 225 | 3 | 3 | 501 |
| 2 | ಮದ್ದೂರು | 19 | 0 | 394 | 6 | 325 | 3 | 64 | 46 | 264 | 1 | 15 | 1137 |
| 3 | ಮಳವಳ್ಳಿ | 115 | 42 | 102 | 3 | 83 | 1 | 20 | 13 | 281 | 4 | 3 | 667 |
| 4 | ಮಂಡ್ಯ | 126 | 29 | 698 | 108 | 459 | 10 | 109 | 42 | 816 | 11 | 33 | 2441 |
| 5 | ನಾಗಮಂಗಲ | 35 | 2 | 19 | 0 | 12 | 1 | 16 | 0 | 193 | 0 | 15 | 293 |
| 6 | ಪಾಂಡವಪುರ | 127 | 14 | 21 | 0 | 23 | 0 | 16 | 0 | 242 | 0 | 32 | 475 |
| 7 | ಶ್ರೀರಂಗಪಟ್ಟಣ | 71 | 10 | 65 | 6 | 44 | 1 | 8 | 0 | 244 | 2 | 14 | 465 |
| | ಒಟ್ಟು | 539 | 97 | 1377 | 128 | 991 | 16 | 295 | 135 | 135 | 21 | 115 | 5979 |

# ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ: 491

## ಅನುಬಂಧ – 03

**ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ**

**ಸಂಘಟಿತ ಕಾರ್ಮಿಕರ ಸಂಖ್ಯೆ ಮತ್ತು ಕೆಲಸ ಮಾಡುತ್ತಿರುವ ಉದ್ಯಮ.**

| ಕ್ರ.ಸಂ | ತಾಲ್ಲೂಕು | ಅಂಗಡಿಗಳು | | ವಾಣಿಜ್ಯ ಸಂಸ್ಥೆಗಳು | | ಹೋಟೆಲ್ ಮತ್ತು ರೆಸ್ಟೋರೆಂಟ್‌ಗಳು | | ಗಾರ್ಮೆಂಟ್ಸ್‌ಗಳು | |
|---|---|---|---|---|---|---|---|---|---|
| | | ಸಂಖ್ಯೆ | ಕಾರ್ಮಿಕರ ಸಂಖ್ಯೆ | ಸಂಖ್ಯೆ | ಕಾರ್ಮಿಕರ ಸಂಖ್ಯೆ | ಸಂಖ್ಯೆ | ಕಾರ್ಮಿಕರ ಸಂಖ್ಯೆ | ಸಂಖ್ಯೆ | ಕಾರ್ಮಿಕರ ಸಂಖ್ಯೆ |
| 1 | ಮಂಡ್ಯ | 1967 | 2013 | 1554 | 3108 | 163 | 489 | 0 | 0 |
| 2 | ಮದ್ದೂರು | 956 | 1685 | 476 | 1577 | 39 | 443 | 5 | 7350 |
| 3 | ಕೃಷ್ಣರಾಜಪೇಟೆ | 450 | 471 | 325 | 667 | 40 | 160 | 1 | 1431 |
| 4 | ನಾಗಮಂಗಲ | 371 | 382 | 212 | 424 | 61 | 244 | 0 | 0 |
| 5 | ಮಳವಳ್ಳಿ | 1110 | 1132 | 327 | 981 | 30 | 120 | 1 | 1200 |
| 6 | ಶ್ರೀರಂಗಪಟ್ಟಣ | 720 | 733 | 309 | 1934 | 125 | 769 | 1 | 1280 |
| 7 | ಪಾಂಡವಪುರ | 697 | 363 | 139 | 1190 | 59 | 162 | 0 | 0 |
| | **ಒಟ್ಟು** | **6271** | **6779** | **3342** | **9881** | **517** | **2387** | **8** | **11261** |

## ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ: 491

### ಅನುಬಂಧ-4

### ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ

| ಕ್ರ ಸಂ | ವರ್ಗಗಳು | ತಾಲ್ಲೂಕುವಾರು ಮಾಹಿತಿ | | | | | | | |
|---|---|---|---|---|---|---|---|---|---|
| | | ಕೃಷ್ಣರಾಜ ಪೇಟೆ | ಮದ್ದೂರು | ಮಳವಳ್ಳಿ | ಮಂಡ್ಯ | ನಾಗಮಂಗಲ | ಪಾಂಡವಪುರ | ಶ್ರೀರಂಗಪಟ್ಟಣ | ಒಟ್ಟು |
| 1. | ಕ್ಷೌರಿಕರು | 46 | 19 | 115 | 124 | 35 | 127 | 71 | **537** |
| 2 | ಕಮ್ಮಾರರು, | 3 | 1 | 4 | 11 | 0 | 0 | 2 | **21** |
| 3 | ಮನೆಗೆಲಸದವರು | 78 | 394 | 102 | 698 | 19 | 21 | 65 | **1377** |
| 4 | ಅಕ್ಕಸಾಲಿಗರು, | 5 | 6 | 3 | 105 | 0 | 0 | 6 | **125** |
| 5 | ಹಮಾಲರು, | 45 | 325 | 83 | 459 | 12 | 23 | 44 | **991** |
| 6 | ಕುಂಬಾರರು, | 0 | 3 | 1 | 10 | 1 | 0 | 1 | **16** |
| 7 | ಮೆಕ್ಯಾನಿಕ್, | 62 | 64 | 20 | 109 | 16 | 16 | 8 | **295** |
| 8 | ಭಟ್ಟಿ ಕಾರ್ಮಿಕ" | 0 | 0 | 42 | 27 | 2 | 14 | 10 | **95** |
| 9 | ಚಿಂದಿ ಆಯುವವರು, | 34 | 46 | 13 | 42 | 0 | 0 | 0 | **135** |
| 10 | ಟೈಲರ್ಸ್, | 225 | 264 | 281 | 806 | 193 | 242 | 244 | **2255** |
| 11 | ಅಗಸರು, | 3 | 15 | 3 | 33 | 15 | 32 | 14 | **115** |
| ಒಟ್ಟು | | **501** | **1137** | **667** | **2441** | **293** | **475** | **465** | **5979** |

# ಅನುಬಂಧ - 5

| 2021-22ನೇ ಸಾಲಿನ ಅನುಸೂಚಿತ ಉದ್ದಿಮೆಗಳಿಗೆ ಕನಿಷ್ಠ ವೇತನ ನಿಗದಿ ಮತ್ತು ಪರಿಷ್ಕರಣೆ ಕುರಿತ ಕನಿಷ್ಠ ಮತ್ತು ಗರಿಷ್ಠ ವೇತನ ದರಗಳ ವಿವರಣೆ | | | | | |
|---|---|---|---|---|---|
| ಕ್ರ ಸಂ | ಅನುಸೂಚಿತ ಉದ್ದಿಮೆಯ ಹೆಸರು | ಕನಿಷ್ಠ ವೇತನ ದರಗಳು (2021-22) | | | |
| | | ದೈನಿಕ | | ಮಾಸಿಕ | |
| | | ಕನಿಷ್ಠ | ಗರಿಷ್ಠ | ಕನಿಷ್ಠ | ಗರಿಷ್ಠ |
| 1 | ಬೇಸಾಯ ಮತ್ತು ಸಂಬಂಧಿತ ಕೆಲಸಗಳಲ್ಲಿ ಉದ್ಯೋಗ | 441.28 | 448.28 | 11473.16 | 11473.16 |
| 2 | ಲಘು ಪಾನೀಯ ಸೋಡಾ ಸಹಿತ ಎಲ್ಲಾ ಇಂಗಾಲಾಮ್ಲಿತ ಪಾನೀಯ, ಮಿನರಲ್ (ಖನಿಜ) ನೀರು ಮತ್ತು ಜ್ಯೂಸ್ (ಹಣ್ಣಿನ ರಸ) ಉತ್ಪಾದನೆ ಹಾಗೂ ಸಂಬಂಧಪಟ್ಟ ಪ್ರಕ್ರಿಯೆಗಳಲ್ಲಿ ಉದ್ಯೋಗ. | 431.60 | 506.60 | 11221.60 | 13171.60 |
| 3 | ಅಗರಬತ್ತಿ ತಯಾರಿಕೆ ಮತ್ತು ಸಾಂಬ್ರಾಣಿ (ಇನ್‌ಸೆನ್ಸ್) ಉತ್ಪನ್ನಗಳ ತಯಾರಿಕೆಯಲ್ಲಿ ಉದ್ಯೋಗ | 383.90 | 443.52 | 9981.60 | 11531.60 |
| 4 | ಅಡಿಕೆ (ಸುಪಾರಿ)ಉದ್ದಿಮೆಗಳಲ್ಲಿ ಉದ್ಯೋಗ | 451.27 | 511.97 | 11733.20 | 13311.03 |
| 5 | ಸ್ವಯಂಯಾನ ಯಂತ್ರ ಶಾಸ್ತ್ರ (ಆಟೋಮೊಬೈಲ್ ಇಂಜಿನಿಯರಿಂಗ್) (ಉತ್ಪಾದನೆ, ಅಸೆಂಬ್ಲಿಂಗ್, ಬಾಡಿ ಬಿಲ್ಡಿಂಗ್, ಸರ್ವೀಸಿಂಗ್ ಮತ್ತು ರಿಪೇರಿ ಕೆಲಸಗಳ ಸಹಿತ) | 431.60 | 557.60 | 11221.60 | 14497.60 |
| 6 | ಬೇಕರಿ ಉದ್ದಿಮೆ ಮತ್ತು ಬೇಕಿಂಗ್ ಪ್ರಕ್ರಿಯೆಗಳಲ್ಲಿ ಉದ್ಯೋಗ. | 451.28 | 659.49 | 11733.20 | 17146.60 |
| 7 | ಬೀಡಿ ತಯಾರಿಕೆ ಪ್ರಕ್ರಿಯೆಯಲ್ಲಿ ಉದ್ಯೋಗ | 240.61 | 294.45 | 11756.60 | 16356.00 |
| 8 | ತಂಬಾಕು ಸಂಸ್ಕರಣಾ ಉದ್ದಿಮೆಗಳಲ್ಲಿ ಉದ್ಯೋಗ | 451.28 | 659.49 | 11733.20 | 17146.60 |
| 9 | ಬಿಸ್ಕತ್ ತಯಾರಿಕಾ ಸಂಸ್ಥೆಗಳಲ್ಲಿ ಉದ್ಯೋಗ | 451.28 | 605.56 | 11733.20 | 15744.47 |

| | | | | | |
|---|---|---|---|---|---|
| 10 | ಹಿತ್ತಾಳೆ, ತಾಮ್ರ, ಅಲ್ಯೂಮಿನಿಯಂ, ಉಕ್ಕು (ಸ್ಟೀಲ್), ಹಿಂಡಾಲಿಯಮ್ ಪಾತ್ರೆಗಳು ಮತ್ತು ಇತರೆ ಉತ್ಪನ್ನಗಳ ತಯಾರಿಕೆಯಲ್ಲಿ ಉದ್ಯೋಗ | 451.28 | 659.49 | 11733.20 | 17146.60 |
| 11 | ಇಟ್ಟಿಗೆ ತಯಾರಿಕೆ ಹಾಗೂ ಪೂರ್ವ ಒತ್ತಡ (ಪ್ರೀ- ಸ್ಟ್ರೆಸ್ಡ್) ದೊಂದಿಗೆ ತಯಾರಿಸಿದ ಉತ್ಪನ್ನಗಳ ತಯಾರಿಕೆಯ ಉದ್ದಿಮೆಗಳಲ್ಲಿ ಉದ್ಯೋಗ | 451.28 | 617.16 | 11733.20 | 16046.20 |
| 12 | ಮರದ ಕೆಲಸ [ಕಾರ್ಪೆಂಟರಿ] ಹಾಗೂ ಮರ ಕೊಯ್ಯುವ [ಸಾಮಿಲ್] ಸಂಸ್ಥೆಗಳಲ್ಲಿ ಉದ್ಯೋಗ | 451.28 | 659.49 | 11733.20 | 17146.60 |
| 13 | ಬೆಂಕಿ ಪೊಟ್ಟಣ ತಯಾರಿಕೆ ಉದ್ದಿಮೆಗಳಲ್ಲಿ ಉದ್ಯೋಗ | 341.00 | 366.03 | 8866.00 | 9517.00 |
| 14 | ಪ್ಲೈವುಡ್ ತಯಾರಿಕಾ ಸಂಸ್ಥೆಗಳಲ್ಲಿ ಉದ್ಯೋಗ | 451.28 | 659.49 | 11733.20 | 17146.60 |
| 15 | ಮರದ ದಿಮ್ಮಿಗಳ ಘಟಕಗಳಲ್ಲಿ ಉದ್ಯೋಗ. | 431.60 | 501.60 | 11221.60 | 13041.60 |
| 16 | ವಿನೀರ್ ಉದ್ದಿಮೆಗಳಲ್ಲಿ ಉದ್ಯೋಗ | 431.60 | 495.60 | 11221.60 | 12885.60 |
| 17 | ಏಲಕ್ಕಿ ಮಲ್ಲೆಗಳು ಮತ್ತು ಏಲಕ್ಕಿ ತೋಟಗಳಲ್ಲಿ ಉದ್ಯೋಗ | 451.28 | 659.49 | 11733.20 | 17146.60 |
| 18 | ಗೋಡಂಬಿ ಸಂಸ್ಕರಣಾ ಉದ್ದಿಮೆಗಳಲ್ಲಿ ಉದ್ಯೋಗ. | 422.15 | 477.05 | 10976.00 | 12406.00 |
| 19 | ಜೇಡಿ ಮಣ್ಣಿನ ಮಡಿಕೆಗಳು, ಸಿರಾಮಿಕ್ಸ್ ಸ್ಟೋನ್ ವೇರ್ ಮತ್ತು ಇತರೆ ಉತ್ಪನ್ನಗಳ ತಯಾರಿಕಾ ಸಂಸ್ಥೆಗಳಲ್ಲಿ ಉದ್ಯೋಗ | 431.60 | 503.60 | 11221.60 | 13093.60 |
| 20 | ಸಿಂಕೋನಾ, ರಬ್ಬರ್, ಟೀ & ಕಾಫೀ ತೋಟಗಳಲ್ಲಿ ಉದ್ಯೋಗ (ಕಛೇರಿ ಸಿಬ್ಬಂದಿಗಳನ್ನು ಹೊರತುಪಡಿಸಿ) | 357.15 | 363.15 | 9286.00 | 9416.00 |

| | | | | | |
|---|---|---|---|---|---|
| 21 | ಸಿಂಕೋನಾ, ರಬ್ಬರ್, ಟೀ & ಕಾಫೀ ತೋಟಗಳಲ್ಲಿ ಉದ್ಯೋಗ (ಕಛೇರಿ ಸಿಬ್ಬಂದಿಗಳು) | 366.15 | 400.15 | 9500.00 | 10398.00 |
| 22 | ರಾಸಾಯನಿಕ ರಸಗೊಬ್ಬರ, ಕೀಟ ನಾಶಕ, ಕ್ರಿಮಿನಾಶಕ ಉತ್ಪಾದನಾ ಉದ್ದಿಮೆಯ ಕೆಲಸಗಳಲ್ಲಿ ಯೋಜನೆ | 451.28 | 659.49 | 11733.20 | 17146.60 |
| 23 | ಕ್ಲಬ್‌ಗಳಲ್ಲಿ ಉದ್ಯೋಗ | 431.60 | 496.60 | 11221.60 | 12911.60 |
| 24 | ಕಾಫಿ ಕ್ಯೂರಿಂಗ್ ಸಂಸ್ಥೆಗಳಲ್ಲಿ ಉದ್ಯೋಗ. | 451.15 | 555.42 | 11730.00 | 14441.00 |
| 25 | ಮಿಠಾಯಿ ತಯಾರಿಸುವ (ಕನ್‌ಫೆಕ್ಷನರಿ) ಉದ್ದಿಮೆಗಳಲ್ಲಿ ಉದ್ಯೋಗ. | 451.28 | 605.56 | 11733.20 | 15744.47 |
| 26 | ಹತ್ತಿ ಹೆಕ್ಕುವ, ಅಮಕುವ ಮತ್ತು ಸಂಬಂಧಪಟ್ಟ ಪ್ರಕ್ರಿಯೆಗಳ ಕೆಲಸಗಳಲ್ಲಿ ಉದ್ಯೋಗ. | 434.16 | 491.73 | 11288.28 | 12784.80 |
| 27 | ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಗಳಲ್ಲಿ ಉದ್ಯೋಗ | 451.22 | 526.22 | 11731.60 | 13681.60 |
| 28 | ಗೃಹಕೃತ್ಯ ಸಹಾಯಕರು, ಮಕ್ಕಳ ಪೋಷಣಾ ಸಹಾಯಕರು, ಹೋಮ್ ನರ್ಸ್‌ಗಳ ಸಹಿತ ವಾಸದ ಮನೆಗಳಲ್ಲಿ ಗೃಹ ಕೆಲಸಗಳ ಉದ್ಯೋಗ | 451.22 | 536.22 | 11731.60 | 14461.60 |
| 29 | ಎಲೆಕ್ಟ್ರಾನಿಕ್ಸ್ ಉದ್ದಿಮೆಗಳಲ್ಲಿ ಉದ್ಯೋಗ | 431.60 | 526.60 | 11221.60 | 13691.60 |
| 30 | ಎಲೆಕ್ಟ್ರಾನಿಕ್ಸ್ ಮತ್ತು ಎಲೆಕ್ಟ್ರೋಪ್ಲೇಟಿಂಗ್ ಉದ್ದಿಮೆಗಳಲ್ಲಿ ಉದ್ಯೋಗ. | 431.60 | 506.60 | 11221.60 | 13171.60 |
| 31 | ಅನುಸೂಚಿತ ಪಟ್ಟಿಗೆ ಸೇರದ ಉದ್ದಿಮೆಯ ಕೆಲಸದಲ್ಲಿ ಉದ್ಯೋಗ. ಕರ್ನಾಟಕ ರಾಜ್ಯ ತಳ ಹಂತದ ಕನಿಷ್ಠ ವೇತನ. | 451.28 | 659.49 | 11733.60 | 17146.60 |
| 32 | ಇಂಜಿನಿಯರಿಂಗ್, ಫ್ಯಾಬ್ರಿಕೇಷನ್ ಹಾಗೂ ಸಂಬಂಧಪಟ್ಟ ಉದ್ದಿಮೆಯ ಕೆಲಸಗಳಲ್ಲಿ ಉದ್ಯೋಗ | 451.28 | 659.49 | 11733.20 | 17146.60 |

| | | | | | |
|---|---|---|---|---|---|
| 33 | ಚಲನಚಿತ್ರ (ಸಿನಿಮಾ / ಕಿರು ಚಿತ್ರ) ಉದ್ದಿಮೆಗಳ ನಿರ್ಮಾಣ, ವಿತರಣೆ, ಜಾಹಿರಾತು ಹಾಗೂ ಸಂಬಂಧಪಟ್ಟ ಕೆಲಸಗಳಲ್ಲಿ ಉದ್ಯೋಗ | 431.60 | 521.60 | 11221.60 | 13561.60 |
| 34 | ಮೀನು ಹಿಡಿಯುವುದು, ಮೀನು ಸಂಸ್ಕರಣೆ, ಮೀನು ಪೀಲಿಂಗ್, ಸೀಗಡಿ / ಏಡಿ ಸಂಸ್ಕರಣೆ ಹಾಗೂ ಕಪ್ಪೆ ಕಾಲು ರಫ್ತು ಮಾಡುವ ಉದ್ದಿಮೆಗಳಲ್ಲಿ ಉದ್ಯೋಗ | 404.45 | 606.60 | 11871.60 | 15771.60 |
| 35 | ಆಹಾರ ಸಂಸ್ಕರಣೆ ಮತ್ತು ಆಹಾರ ಪದಾರ್ಥಗಳ ಪ್ಯಾಕಿಂಗ್ (ಸಿದ್ಧ ತಿನಿಸುಗಳು, ಸಿದ್ಧ ಪಾನೀಯ ಹಾಗೂ ಮಸಾಲೆ ಸಹಿತ) ಪ್ರಕ್ರಿಯೆಗಳಲ್ಲಿ ಉದ್ಯೋಗ | 431.60 | 506.60 | 11221.60 | 13171.60 |
| 36 | ಅರಣ್ಯ ಮತ್ತು ಕಟ್ಟಿಗೆ ಡಿಪೋ (ಫಾರೆಸ್ಟ್ರಿ ಮತ್ತು ಟಿಂಬರಿಂಗ್) ಉದ್ದಿಮೆಗಳಲ್ಲಿ ಉದ್ಯೋಗ | 511.91 | 605.56 | 13311.03 | 15744.47 |
| 37 | ಫೌಂಡ್ರಿ (ಯಂತ್ರಗಳ ಸಹಿತ ಅಥವಾ ರಹಿತ ಮೆಷಿನ್ ಶಾಫ್) ಗಳಲ್ಲಿ ಉದ್ಯೋಗ | 431.60 | 557.60 | 11221.60 | 14497.60 |
| 38 | ಗಾಜು ಮತ್ತು ಗಾಜಿನ ಉತ್ಪನ್ನಗಳ ಸಂಸ್ಥೆಗಳಲ್ಲಿ ಉದ್ಯೋಗ | 431.60 | 511.60 | 11221.60 | 13301.60 |
| 39 | ಗ್ರಾನೈಟ್ ಕಲ್ಲುಗಳು ಹಾಗೂ ಮಾರ್ಬಲ್ ಉದ್ದಿಮೆಗಳಲ್ಲಿ ಉದ್ಯೋಗ | 451.28 | 659.49 | 11733.20 | 17146.60 |
| 40 | ಕೈಮಗ್ಗ ಮತ್ತು ವಿದ್ಯುತ್‌ಚಾಲಿತ ಮಗ್ಗ [ಹತ್ತಿ] ಉದ್ದಿಮೆಗಳಲ್ಲಿ ಉದ್ಯೋಗ. | 409.84 | 473.30 | 10656.00 | 12306.00 |
| 41 | ಆಸ್ಪತ್ರೆಗಳು, ಪ್ರಸವಾಲಯಗಳು (ಮೆಟರ್ನಿಟಿ ಹೋಂಗಳು), ಶುಶ್ರೂಷಾಲಯ (ನರ್ಸಿಂಗ್ ಹೋಂಗಳು) ಕ್ಲಿನಿಕ್, ಹಾಗೂ ವ್ಯಸನ ಮುಕ್ತ ಕೇಂದ್ರಗಳಲ್ಲಿ ಉದ್ಯೋಗ | 451.22 | 641.19 | 11731.60 | 16671.60 |

| | | | | | |
|---|---|---|---|---|---|
| 42 | ವಸತಿ ನಿಲಯಗಳು (ಹಾಸ್ಟೆಲ್‌ಗಳು), ಅತಿಥಿ ಗೃಹಗಳು, ಹೋಮ್ ಸ್ಟೇಗಳು, ಪೇಯಿಂಗ್ ಗೆಸ್ಟ್ ಸಂಸ್ಥೆಗಳು, ಸರ್ವೀಸ್ಡ್ ಅಪಾರ್ಟ್‌ಮೆಂಟ್‌ಗಳು, ರೆಸಿಡೆಂಟ್ಸ್ ಅಸೋಸಿಯೇಷನ್, ಮದುವೆ ಹಾಗೂ ಸಮುದಾಯ ಭವನಗಳಲ್ಲಿ ಉದ್ಯೋಗ | 431.60 | 518.60 | 11221.60 | 13483.60 |
| 43 | ಹೋಟೆಲ್ / ವಸತಿ ಸಹಿತ ಹೋಟೆಲ್‌ಗಳು, ರೆಸ್ಟೋರೆಂಟ್ ಮೋಟೆಲ್‌ಗಳು, ಲಾಡ್ಜ್‌ಗಳು, ಡಾಬಾಗಳು, ಕ್ಯಾಂಟೀನ್, ಹೊರಾಂಗಣ ಆಹಾರ ತಯಾರಿಕೆ ಹಾಗೂ ಸರಬರಾಜು (ಕೇಟರಿಂಗ್) ಮತ್ತು ಸಂಬಂಧಪಟ್ಟ ಸಂಸ್ಥೆಗಳಲ್ಲಿ ಉದ್ಯೋಗ | 431.60 | 536.68 | 11221.60 | 13951.60 |
| 44 | ಮಂಜುಗಡ್ಡೆ ಕಾರ್ಖಾನೆ (ಐಸ್ ಫ್ಯಾಕ್ಟರಿ) ಐಸ್ ಕ್ರೀಮ್ ಹಾಗೂ ಶೀತಲ ಸಂರಕ್ಷಣಾ ಸಂಸ್ಥೆಗಳಲ್ಲಿ ಉದ್ಯೋಗ. | 456.60 | 518.60 | 11871.60 | 13483.60 |
| 45 | ಖಂಡಸಾರಿ ಸಕ್ಕರೆ ಕಾರ್ಖಾನೆಗಳಲ್ಲಿ ಉದ್ಯೋಗ | 451.28 | 659.49 | 11733.20 | 17146.60 |
| 46 | ಬಟ್ಟೆ ಒಗೆಯುವ, ಡ್ರೈಕ್ಲೀನ್ ಮತ್ತು ಲಾಂಡ್ರಿ ಉದ್ದಿಮೆಗಳ ಕೆಲಸಗಳಲ್ಲಿ ಉದ್ಯೋಗ | 431.60 | 521.60 | 11221.60 | 13561.60 |
| 47 | ಮದ್ಯ ತಯಾರಿಕಾ (ಡಿಸ್ಟಿಲರೀಸ್ ಹಾಗೂ ಬ್ರಿವರೀಸ್), ಬಾಟಲಿಂಗ್ ಹಾಗೂ ಪ್ಯಾಕಿಂಗ್ ಸಹಿತ ಉದ್ದಿಮೆಗಳ ಕೆಲಸಗಳಲ್ಲಿ ಉದ್ಯೋಗ. | 431.60 | 506.60 | 11221.60 | 13171.60 |

| | | | | | |
|---|---|---|---|---|---|
| 48 | ಆಯುರ್ವೇದ, ಯೋಗ, ಯುನಾನಿ, ಸಿದ್ಧ ಹೋಮಿಯೋಪತಿ (ಆಯುಷ್) ಹಾಗೂ ಅಲೋಪಥಿಕ್ ಔಷಧಿಗಳ ತಯಾರಿಕೆಯಲ್ಲಿ ಉದ್ಯೋಗ. (ಉತ್ಪಾದನೆ, ವಿತರಣೆ ಜಾಹಿರಾತು ವಿಭಾಗಗಳ ಸಹಿತ) | 431.60 | 531.60 | 11221.60 | 13821.60 |
| 49 | ಅಕ್ಕಿ, ಭತ್ತ, ಜೋಳ ಅಥವಾ ಇನ್ನಿತರ ಧಾನ್ಯಗಳಿಂದ ಮಂಡಕ್ಕಿ, ಅವಲಕ್ಕಿ, ಚುರುಮುರಾ, ಮುರುಮುರಾ ಹಾಗೂ ಇತರೆ ಉತ್ಪನ್ನಗಳನ್ನು ತಯಾರಿಸುವ ಉದ್ದಿಮಗಳ ಕೆಲಸದಲ್ಲಿ ಉದ್ಯೋಗ | 451.28 | 605.56 | 11733.20 | 15744.47 |
| 50 | ಮೆಟಲ್ ರೋಲಿಂಗ್ ಅಂಡ್ ರೀರೋಲಿಂಗ್– [ಫೆರಸ್] ಉದ್ದಿಮೆಗಳಲ್ಲಿ ಉದ್ಯೋಗ | 451.28 | 659.49 | 11733.20 | 17146.60 |
| 51 | ಮೆಟಲ್ ರೋಲಿಂಗ್ ಅಂಡ್ ರೀರೋಲಿಂಗ್ ಉದ್ದಿಮೆಗಳಲ್ಲಿ ಉದ್ಯೋಗ. [ನಾನ್–ಫೆರಸ್] | 451.28 | 659.49 | 11733.20 | 17146.60 |
| 52 | ಲಘು ಸಿಮೆಂಟ್ ಸ್ಥಾವರಗಳಲ್ಲಿ ಉದ್ಯೋಗ. | 431.60 | 496.60 | 11221.60 | 12911.60 |
| 53 | ಮೊಸಾಯಿಕ್ ಹಂಚುಗಳು, ಎಲ್ಲಾ ರೀತಿಯ ನೆಲ ಹಾಸು ಹಂಚುಗಳು, ಹೊಳಪಿನ ಹಂಚುಗಳ ಉತ್ಪಾದನಾ ಉದ್ದಿಮೆಗಳಲ್ಲಿ ಉದ್ಯೋಗ | 451.28 | 659.49 | 11733.20 | 17146.60 |
| 54 | ಎಣ್ಣೆ ಮಿಲ್‌ಗಳಲ್ಲಿ ಉದ್ಯೋಗ. | 431.60 | 501.60 | 11211.60 | 13041.60 |
| 55 | ಪೆಟ್ರೋಲ್, ಡೀಸೆಲ್ ಆಯಿಲ್ ಮತ್ತು ಎಲ್.ಪಿ.ಜಿ. ಪಂಪ್‌ಗಳಲ್ಲಿ ಉದ್ಯೋಗ | 451.28 | 659.49 | 11733.20 | 17146.60 |
| 56 | ಪ್ಲಾಸ್ಟಿಕ್, ಪಾಲಿ ಪ್ಲಾಸ್ಟಿಕ್, ರಬ್ಬರ್, ಪಿವಿಸಿ ಪೈಪ್ಸ್ ಉತ್ಪಾದನಾ ಉದ್ದಿಮೆಗಳಲ್ಲಿ ಉದ್ಯೋಗ | 431.60 | 496.60 | 11221.60 | 12911.60 |
| 57 | ಮುದ್ರಣ ಹಾಗೂ ಪ್ರಸರಣಾ ಉದ್ದಿಮೆಗಳಲ್ಲಿ ಉದ್ಯೋಗ | 431.60 | 503.60 | 11221.60 | 13093.60 |

| | | | | | |
|---|---|---|---|---|---|
| 58 | ಖಾಸಗಿ ವಿತ್ತ ನಿಗಮಗಳು, (ಫೈನಾನ್ಸ್ ಕಾರ್ಪೋರೇಷನ್) ಚಿಟ್ ಫಂಡ್‌ಗಳು ಹಾಗೂ ಕಾನೂನು ಬದ್ಧ ಬ್ಯಾಂಕಿಂಗ್ ರಹಿತ ನಗದು ವಹಿವಾಟು ಸಂಸ್ಥೆಗಳಲ್ಲಿ ಉದ್ಯೋಗ | 431.60 | 506.60 | 11221.60 | 13171.60 |
| 59 | ಶೌಚಾಲಯಗಳು, ಸ್ನಾನಗೃಹಗಳು, ಒಳಚರಂಡಿಗಳನ್ನು ಶುಚಿ ಮಾಡುವ (Scavenging) ಕೆಲಸಗಳಲ್ಲಿ ಉದ್ಯೋಗ. (ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಪಂಚಾಯತ್ ರಾಜ್ ಸಂಸ್ಥೆಗಳನ್ನು ಹೊರತುಪಡಿಸಿ). | 591.22 | 641.22 | 15371.00 | 16671.60 |
| 60 | ಹಾಲು ಶೇಖರಣೆ, ಸಂಸ್ಕರಣೆ ಹಾಗೂ ವಿತರಣಾ ಪ್ರಕ್ರಿಯೆಯ ಉದ್ದಿಮೆಗಳಲ್ಲಿ ಉದ್ಯೋಗ | 431.60 | 506.60 | 11221.60 | 13171.60 |
| 61 | ಸಾರ್ವಜನಿಕ ಸಾರಿಗೆ ಸಂಸ್ಥೆಗಳ ಉದ್ದಿಮೆಗಳಲ್ಲಿ ಉದ್ಯೋಗ | 431.60 | 531.60 | 11221.60 | 13821.60 |
| 62 | ಕಾಗದ, ಪಲ್ಪ್ ಕಾಗದ, ರಟ್ಟಿನ ಹಲಗೆ (ಕಾರ್ಡ್‌ಬೋರ್ಡ್), ಹುಲ್ಲಿನ ಹಲಗೆ (ಸ್ಟ್ರಾ ಬೋರ್ಡ್) ಮತ್ತು ನ್ಯೂಸ್ ಪ್ರಿಂಟ್ ಉದ್ದಿಮೆಗಳಲ್ಲಿ ಉದ್ಯೋಗ | 451.28 | 659.49 | 11733.20 | 17146.60 |
| 63 | ಅಕ್ಕಿ, ಧಾನ್ಯಗಳು ಮತ್ತು ಬೇಳೆ ಗಿರಣಿ ಉದ್ದಿಮೆಗಳಲ್ಲಿ ಉದ್ಯೋಗ | 451.28 | 659.49 | 11733.20 | 17146.60 |
| 64 | ರಬ್ಬರ್ ಉತ್ಪನ್ನಗಳು (ಫೋಮ್ ಮತ್ತು ಕಾಯರ್ ರಬ್ಬರ್ ಸಹಿತ) ಉದ್ದಿಮೆಗಳಲ್ಲಿ ಉದ್ಯೋಗ | 451.28 | 659.49 | 11733.20 | 17146.60 |
| 65 | ಔಷಧಿಗಳು, ಗೃಹಪಯೋಗಿ ವಸ್ತುಗಳ ವೃತ್ತಿಪರ ಪ್ರವರ್ತಕ ಮತ್ತು ಮಾರಾಟದಲ್ಲಿ ಉದ್ಯೋಗ | 431.60 | 526.60 | 11221.60 | 13961.60 |

| | | | | | |
|---|---|---|---|---|---|
| 66 | ಭದ್ರತಾ ಏಜೆನ್ಸಿಗಳಲ್ಲಿ ಉದ್ಯೋಗ. (ಕಛೇರಿ ಸಿಬ್ಬಂದಿ ಹಾಗೂ ಭದ್ರತಾ ಸಿಬ್ಬಂದಿಗಳನ್ನು ಏಜೆನ್ಸಿಯ ಮೂಲಕ ನಿಯೋಜಿಸಿಕೊಳ್ಳುವ ಎಲ್ಲಾ ಸಂಸ್ಥೆಗಳು ಹಾಗೂ ಉದ್ದಿಮೆಗಳ ಸಹಿತ). | 451.22 | 576.60 | 11731.60 | 14991.60 |
| 67 | ರೇಷ್ಮೆ ಘಟಕಗಳಲ್ಲಿ ಮತ್ತು ಪ್ರಕ್ರಿಯೆಗಳಲ್ಲಿ ಉದ್ಯೋಗ ಭಾಗ-1 | 418.74 | 605.50 | 10887.20 | 15744.47 |
| 68 | ರೇಷ್ಮೆ ಘಟಕಗಳಲ್ಲಿ ಮತ್ತು ಪ್ರಕ್ರಿಯೆಗಳಲ್ಲಿ ಉದ್ಯೋಗ ಭಾಗ-2 | 451.28 | 659.49 | 11733.20 | 17146.60 |
| 69 | ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳಲ್ಲಿ ಉದ್ಯೋಗ | 451.28 | 659.49 | 11733.20 | 17146.60 |
| 70 | ಸ್ಪಿನ್ನಿಂಗ್ ಮಿಲ್ ಉದ್ದಿಮೆಗಳಲ್ಲಿ ಉದ್ಯೋಗ | 351.88 | 378.73 | 9148.87 | 9847.08 |
| 71 | ಸ್ಪನ್ ಪೈಪುಗಳು, ಕಾಂಕ್ರೀಟ್ ಪೈಪುಗಳು, ಸಾನಿಟರಿ ಫಿಟ್ಟಿಂಗ್‌ಗಳು, ಪ್ಲೈನ್ ಸಿಮೆಂಟ್ ಕಾಂಕ್ರೀಟ್ (ಪಿ.ಸಿ.ಸಿ.) ಹಾಗೂ ರೀ-ಇನ್‌ಪೋರ್ಸ್‌ಡ್ ಸಿಮೆಂಟ್ ಕಾಂಕ್ರೀಟ್ (ಆರ್.ಸಿ.ಸಿ). ಪೈಪುಗಳು ಮತ್ತು ಕಂಬಗಳ ಉತ್ಪಾದನಾ ಉದ್ದಿಮೆಗಳಲ್ಲಿ ಉದ್ಯೋಗ | 431.60 | 531.60 | 11221.60 | 13821.60 |
| 72 | ಲೋಹದ ಅಲ್ಮೇರಾಗಳು, ಕುರ್ಚಿಗಳು, ಮೇಜುಗಳು ಹಾಗೂ ಇತರೆ ಪೀಠೋಪಕರಣಗಳನ್ನು ಉತ್ಪಾದಿಸುವ ಉದ್ದಿಮೆಗಳಲ್ಲಿ ಉದ್ಯೋಗ | 431.60 | 531.60 | 11221.60 | 13821.60 |
| 73 | ಕಲ್ಲು ಒಡೆಯುವುದು ಮತ್ತು ಕಲ್ಲು ಪುಡಿ ಮಾಡುವ ಉದ್ದಿಮೆಗಳಲ್ಲಿ ಉದ್ಯೋಗ | 451.28 | 605.56 | 11733.20 | 15744.47 |
| 74 | ಚರ್ಮ ಹದ ಮಾಡುವ ಉದ್ದಿಮೆಗಳಲ್ಲಿ ಉದ್ಯೋಗ | 345.26 | 384.26 | 8976.80 | 10000.80 |

| | | | | | |
|---|---|---|---|---|---|
| 75 | ಬಟ್ಟೆಗಳ ತಯಾರಿಕೆ (ಗಾರ್ಮೆಂಟ್ಸ್), ವಸ್ತ್ರ ವಿನ್ಯಾಸ (ಕಾಸ್ಟ್ಯೂಮ್ಸ್) ಮತ್ತು ಟೈಲರಿಂಗ್ ಉದ್ದಿಮೆಗಳಲ್ಲಿ ಉದ್ಯೋಗ | 354.21 | 413.41 | 9204.30 | 10758.86 |
| 76 | ರೇಷ್ಮೆ ಬಟ್ಟೆಗಳ (ಸಿಲ್ಕ್) ಉದ್ದಿಮೆಗಳಲ್ಲಿ ಉದ್ಯೋಗ | 419.36 | 512.95 | 10903.39 | 13336.70 |
| 77 | ಹೆಂಚು ತಯಾರಿಕೆ ಉದ್ದಿಮೆಗಳಲ್ಲಿ ಉದ್ಯೋಗ | 451.28 | 605.56 | 11733.20 | 15744.47 |
| 78 | ಶೇಂದಿ ಇಳಿಸುವ ಉದ್ದಿಮೆಗಳಲ್ಲಿ ಉದ್ಯೋಗ | 451.28 | 605.56 | 11733.20 | 15744.47 |
| 79 | ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಪಂಚಾಯತ್ ರಾಜ್ ಸಂಸ್ಥೆಗಳಲ್ಲಿ ಉದ್ಯೋಗ | 466.60 | 14991.60 | 12131.60 | 16751.60 |
| 80 | ಸಹಕಾರ ಸೊಸೈಟಿಗಳಲ್ಲಿ ಉದ್ಯೋಗ | 451.28 | 659.99 | 11733.20 | 17146.60 |
| 81 | ಚಿನ್ನ ಮತ್ತು ಬೆಳ್ಳಿ ಆಭರಣಗಳ ತಯಾರಿಕೆ ಮತ್ತು ಹರಳುಗಳು, ವಜ್ರಗಳನ್ನು ಕತ್ತರಿಸುವುದು, ಹೊಳಪು ಗೊಳಿಸುವ ಉದ್ದಿಮೆಗಳಲ್ಲಿ ಉದ್ಯೋಗ | 451.28 | 659.49 | 11733.20 | 17146.60 |
| 82 | ಬಟ್ಟೆಗಳಿಗೆ ಬಣ್ಣ ಹಾಕುವ (ಡೈ) ಮತ್ತು ಅಚ್ಚು ಹಾಕುವ (ಪ್ರಿಂಟ್) ಹಾಕುವ ಉದ್ದಿಮೆಗಳಲ್ಲಿ ಉದ್ಯೋಗ | 356.57 | 423.19 | 9270.95 | 11003.07 |
| 83 | ಸರಕು ಸಾಮಗ್ರಿಗಳ ಹೇರುವ ಮತ್ತು ಇಳಿಸುವ (ಲೋಡಿಂಗ್ ಮತ್ತು ಅನ್‌ಲೋಡಿಂಗ್) ಕೆಲಸಗಳಲ್ಲಿ ಉದ್ಯೋಗ | ತುಂಡು ಆಧಾರ | | | |

# ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ: 491

**ಅನುಬಂಧ – 06**

ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ಕಾರ್ಮಿಕರಿಗೆ ನೀಡಲಾದ ಸೌಲಭ್ಯಗಳ ಮಾಹಿತಿ

| 2019-20 | | | | | | | | | | | | |
|---|---|---|---|---|---|---|---|---|---|---|---|---|
| ಕ್ರ.ಸ | ತಾಲ್ಲೂಕು | ಶೈಕ್ಷಣಿಕ ಧನಸಹಾಯ | ಮೊತ್ತ | ಮದುವೆ ಧನಸಹಾಯ | ಮೊತ್ತ | ವೈದ್ಯಕೀಯ ಧನಸಹಾಯ | ಮೊತ್ತ | ಪ್ರಮುಖ ವೈದ್ಯಕೀಯ | ಮೊತ್ತ | ಹೆರಿಗೆ ಧನಸಹಾಯ | ಮೊತ್ತ |
| 1 | ಮಂಡ್ಯ | 594 | 3862000 | 130 | 8500000 | 3 | 2100 | 12 | 425594 | 0 | 0 |
| 2 | ಮಳವಳ್ಳಿ | 439 | 2324000 | 22 | 800000 | 0 | 0 | 12 | 599631 | 0 | 0 |
| 3 | ಶ್ರೀರಂಗಪಟ್ಟಣ | 204 | 1157000 | 13 | 325000 | 0 | 0 | 2 | 77079 | 0 | 0 |
| 4 | ಪಾಂಡವಪುರ | 269 | 1293000 | 21 | 1050000 | 0 | 0 | 1 | 69583 | 0 | 0 |
| 5 | ಮದ್ದೂರು | 331 | 2267000 | 53 | 2650000 | 3 | 3000 | 2 | 220452 | 0 | 0 |
| 6 | ಕೆ.ಆರ್ ಪೇಟೆ | 262 | 1910000 | 19 | 950000 | 0 | 0 | 1 | 10000 | 0 | 0 |
| 7 | ನಾಗಮಂಗಲ | 93 | 458000 | 27 | 1350000 | 0 | 0 | 1 | 19836 | 0 | 0 |
| | | 2192 | 13271000 | 285 | 15625000 | 6 | 5100 | 31 | 1422175 | 0 | 0 |

# ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ: 491

## ಅನುಬಂಧ – 07

## ಕರ್ನಾಟಕ ಕಾರ್ಮಿಕ ಕಲ್ಯಾಣ ಮಂಡಳಿ, ಬೆಂಗಳೂರು

**20-21** ನೇ ಸಾಲಿನಲ್ಲಿ ಕಲ್ಯಾಣ ಯೋಜನೆಗಳಡಿಯಲ್ಲಿ ಸಂಘಟಿತ ಕಾರ್ಮಿಕರು ಮತ್ತು ಅವರ ಕುಟುಂಬದ ಅವಲಂಬಿತರಿಗೆ ವಿವಿಧ ಸೌಲಭ್ಯ ನೀಡಿರುವಜಿಲ್ಲಾವಾರು ಫಲಾನುಭವಿಗಳ ವಿವರ.

| ಯೋಜನೆಗಳು | | ಶೈಕ್ಷಣಿಕ ಪ್ರೋತ್ಸಾಹ ಧನ ಸಹಾಯ | | ಮೃತ ಕಾರ್ಮಿಕನ ಅಂತ್ಯ ಸಂಸ್ಕಾರಕ್ಕೆ ಧನ ಸಹಾಯ | | ವೈದ್ಯಕೀಯ ನೆರವು | | ವಾರ್ಷಿಕ ಕ್ರೀಡಾ ಚಟುವಟಿಕೆ | | ವಾರ್ಷಿಕ ವೈದ್ಯಕೀಯ ತಪಾಸಣೆ ಶಿಭಿರ ಹಮ್ಮಿಕೊಳ್ಳುವ ಟ್ರೇಡ್ ಯೂನಿಯನ್/ ಸಂಸ್ಥೆಗಳಿಗೆ ಧನ ಸಹಾಯ | | ಕಾರ್ಮಿಕರ ಅಪಘಾತ ಧನ ಸಹಾಯ | | ಮೇ॥ ಎಸ್.ಬಿ. ರಾಲಿ ಸಾಸ್ ಇಂಡಸ್ಟ್ರೀಸ್, ಯಾದಗಿರಿ, ಅಪಘಾತ ಕ್ಕಿಡಾಗಿ ಮೃತಪಟ್ಟ ಕಾರ್ಮಿಕರಿಗೆ ಪರಿಹಾರ ಧನ ಸಹಾಯ | |
|---|---|---|---|---|---|---|---|---|---|---|---|---|---|---|---|
| ಕ್ರ.ಸಂ | ಜಿಲ್ಲೆ | ಫಲಾನುಭವಿಗಳು | ಮೊತ್ತ | ಫಲಾನುಭವಿಗಳು | ಮೊತ್ತ | ಫಲಾನು ಭವಿಗಳು | ಮೊತ್ತ | ಫಲಾನು ಭವಿಗಳು | ಮೊತ್ತ | ಫಲಾನು ಭವಿಗಳು | ಮೊತ್ತ | ಫಲಾನು ಭವಿಗಳು | ಮೊತ್ತ | ಫಲಾನು ಭವಿಗಳು | ಮೊತ್ತ |
| 1 | ಬೆಂಗಳೂರು ನಗರ | 4338 | 2,06,12,000 | 112 | 5,60,000 | 2 | 20,000 | | | 401 (2ಸಂಘಟನೆ) | 60,000 | | | | |
| 2 | ಬೆಂಗಳೂರು (ಗ್ರಾ) | 509 | 20,20,000 | 12 | 60,000 | – | – | – | – | – | – | – | – | – | – |
| 3 | ದಕ್ಷಿಣ ಕನ್ನಡ | 1041 | 49,80,000 | 3 | 15,000 | – | – | – | – | – | – | – | – | – | – |
| 4 | ತುಮಕೂರು | 886 | 35,44,000 | 14 | 70,000 | – | – | – | – | – | – | – | – | – | – |
| 5 | ಉಡುಪಿ | 2988 | 1,19,67,000 | 9 | 45,000 | – | – | – | – | – | – | – | – | – | – |
| 6 | ಬೆಳಗಾಂ | 684 | 27,67,000 | 34 | 1,70,000 | 4 | 40,000 | – | – | – | – | 1 | 3,000 | – | – |
| 7 | ಮಂಡ್ಯ | 432 | 19,58,000 | 18 | 90,000 | 1 | 10,000 | – | – | – | – | – | – | – | – |
| 8 | ಮೈಸೂರು | 636 | 29,72,000 | 23 | 1,15,000 | – | – | – | – | – | – | – | – | – | – |
| 9 | ರಾಮನಗರ | 212 | 8,92,000 | 9 | 45,000 | – | – | – | – | – | – | – | – | – | – |
| 10 | ಚಿಕ್ಕಬಳ್ಳಾಪುರ | 104 | 5,01,000 | 1 | 5,000 | – | – | – | – | – | – | – | – | – | – |
| 11 | ಶಿವಮೊಗ್ಗ | 595 | 23,50,000 | 8 | 40,000 | – | – | – | – | – | – | – | – | – | – |
| 12 | ಹಾಸನ | 398 | 17,14,000 | 17 | 85,000 | – | – | | – | – | – | – | – | – | – |

| | | | | | | | | | | | | | | | |
|---|---|---|---|---|---|---|---|---|---|---|---|---|---|---|---|
| 13 | ಧಾರವಾಡ | 84 | 4,08,000 | 22 | 1,10,000 | – | – | | – | – | – | – | – | – | – |
| 14 | ದಾವಣಗೆರೆ | 100 | 4,61,000 | 5 | 25,000 | – | – | | – | – | – | – | – | – | – |
| 15 | ಚಿತ್ರದುರ್ಗ | 21 | 82,000 | 2 | 10,000 | – | – | | – | – | – | – | – | – | – |
| 16 | ಉತ್ತರ ಕನ್ನಡ | 48 | 1,94,000 | – | – | – | – | | – | – | – | – | – | – | – |
| 17 | ಚಿಕ್ಕಮಗಳೂರು | 43 | 1,98,000 | 3 | 15,000 | – | – | | – | – | – | – | – | – | – |
| 18 | ಬಾಗಲಕೋಟೆ | 54 | 2,09,000 | 4 | 20,000 | – | – | – | – | – | – | – | – | – | – |
| 19 | ಕೊಡಗು | 25 | 1,20,000 | 1 | 5,000 | – | – | – | – | – | – | – | – | – | – |
| 20 | ಗದಗ | 26 | 1,18,000 | 9 | 45,000 | – | – | – | – | – | – | – | – | – | – |
| 21 | ಕೋಲಾರ | 319 | 13,26,000 | 10 | 50,000 | – | – | – | – | – | – | – | – | – | – |
| 22 | ವಿಜಯಪುರ | 20 | 1,07,000 | 16 | 80,000 | – | – | – | – | – | – | – | – | – | – |
| 23 | ಹಾವೇರಿ | 99 | 3,52,000 | 7 | 35,000 | – | – | – | – | – | – | – | – | – | – |
| 24 | ಕಲಬುರ್ಗಿ | 5 | 31,000 | 6 | 30,000 | – | – | – | – | – | – | – | – | – | – |
| 25 | ಬೀದರ್ | 6 | 26,000 | 33 | 1,65,000 | – | – | – | – | – | – | – | – | – | – |
| 26 | ಬಳ್ಳಾರಿ | 5 | 22,000 | 3 | 15,000 | – | – | – | – | – | – | – | – | – | – |
| 27 | ಕೊಪ್ಪಳ | 20 | 80,000 | 0 | 0 | – | – | – | – | – | – | – | – | – | – |
| 28 | ರಾಯಚೂರು | 2 | 6,000 | 2 | 10,000 | – | – | – | – | – | – | – | – | – | – |
| 29 | ಯಾದಗಿರಿ | 0 | 0 | 0 | 0 | – | – | – | – | – | – | – | – | 2 | 6,00,000 |
| 30 | ಚಾಮರಾಜನಗರ | 29 | 1,31,000 | 4 | 20,000 | – | – | – | – | – | – | – | – | – | – |
| | **ಒಟ್ಟು** | **13,729** | **6,01,48,000** | **387** | **19,35,000** | 7 | **70,000** | – | – | **401** | 60,000 | 1 | 3,000 | 2 | 6,00,000 |

ಷರಾ: 2020-21ನೇ ಸಾಲಿನಲ್ಲಿ ಅಂತ್ಯದವರೆಗೆ ಕಲ್ಯಾಣ ಯೋಜನೆಗಳಡಿಯಲ್ಲಿ ವಿವಿಧ ಸೌಲಭ್ಯಗಳನ್ನು ಒಟ್ಟು 14,527ಫಲಾನುಭವಿಗಳಿಗೆ ಒಟ್ಟು ರೂ. 6,28,16,000/- ಗಳ ಧನ ಸಹಾಯ ಸೌಲಭ್ಯ ನೀಡಲಾಗಿದೆ.